ಅಲ್ಲಿ ರೈಲ್ವೆ ಸ್ಟೇಷನ್, ಬಸ್ ಸ್ಟಾಂಡ್, ಎಲ್ಲಾ ಇರುವುದರಿಂದ ಇದು ಅನುಕೂಲವಾಗುವುದಲ್ಲದೆ ನೇರವಾದ ಸಂಪರ್ಕ ಇಟ್ಟುಕೊಂಡು ಮಾಡಿದ್ದರು. ಇತ್ತೀಚೆಗೆ ಮಾನ್ಯ ಕರಿಬಸವನಗೌಡರು ತಾಸಕರಾದ ಮೇಲೆ ತಮ್ಮ ಕೋಗಾಲಿ ಗ್ರಾಮವು ಎಲ್ಲಕ್ಕೂ ಕೇಂದ್ರ ಸ್ಥಳವಾಗಿರುವುದರಿಂದ ಮತ್ತು ಸಮೀಪವಾಗಿರುವುದಲ್ಲದೆ ೮ ವಿಲೇಜ್ ಅಕೌಂಟೆಂಟ್‌ಗಳ ಪೈಕಿ ೬ ವಿಲೇಜ್ ಅಕೌಂಟೆಂಟ್‌ಗಳಿಗೂ ಕೂಡ ಸಮೀಪವಾಗಿರುವುದರಿಂದ ಮಾಲ್ವಿಯಲ್ಲಿರತಕ್ಕ ಹೆಡ್‌ಕ್ವಾರ್ಟರ್ಸ್‌ನ್ನು ಕೋಗಾಲಿಗೆ ಷಿಫ್ಟ್ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಇದನ್ನು ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್‌ಗಳಿಗೂ ಕೂಡ ಪರಿಶೀಲಿಸಿ ಇದು ಎಲ್ಲಕ್ಕೂ ಕೇಂದ್ರ ಸ್ಥಳವಾಗಿರುವುದರಿಂದಲೂ, ವಿಲೇಜ್ ಅಕೌಂಟೆಂಟ್‌ಗಳಿಗೆ ಅನುಕೂಲವಾಗಿರುವುದರಿಂದಲೂ ಕೋಗಾಲಿಯನ್ನೇ ಹೆಡ್‌ಕ್ವಾರ್ಟರ್ಸ್ ಮಾಡಬೇಕೆಂದು ರೆಕಮೆಂಡ್ ಮಾಡಿ ಕಳುಹಿಸಿರುವುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಆಂತೂ ಆದಷ್ಟು ಬೇಗ ಷಿಫ್ಟ್ ಮಾಡಿಸುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಎನ್. ಕರಿಬಸವನಗೌಡ.—ಆದಷ್ಟು ಬೇಗ ಎಂದರೆ ಎಷ್ಟು ದಿವಸದಲ್ಲಿ ಮಾಡುತ್ತೀರಾ ?

ಶ್ರೀ ಎಂ. ಎಂ. ಖಾರ್ಗೆ.—ಸರ್ಕಾರದಲ್ಲಿ ಬಳಸುವ ಶಬ್ದವೇ ಆದು. ಯಾವಾಗಲೂ ಆದಷ್ಟು ಬೇಗ ಎನ್ನುವ ಶಬ್ದವನ್ನೇ ಉಪಯೋಗಿಸುವುದು.

Backward Class unemployed Persons in the State

200 SRI M. GANGANNA (Kustagi).—Will the Minister for Labour be pleased to state.—

(a) the number of unemployed on the Live Registers of different employment exchanges in the State as on 1-4-1981:

(b) how many of them belong to;—

(c) programmes if any, in the State to solve the unemployment among the Backward classes.

SRI A. B. JAKANUR (Minister for Labour).—

(a) 6,07,432.

(b) —

		S.C.	S.T.	B.C.M
i)	Post-Graduates	310	54	646
ii)	Graduates	2921	432	8265
iii)	SSLC passed	24346	3354	20416
iv)	Illiterates	11180	1177	2716

		Backward Caste	B.T.	B.S.G.	Others
i)	Post-Graduates	154	103	391	3493
ii)	Graduates	1808	995	6196	48478
iii)	SSLC passed	5351	1270	12446	220095
iv)	Illiterates	1334	447	1258	110940

(c) I. Stipendiary Employment Scheme.

II. Programme for extending training facilities to the Backward Class unemployed youths in Autoriksha Driving light/heavy Vehicles and Tractor Driving.

III. Self-Employment programme by the Karnataka Backward Classes and Minorities Development Corporation Ltd.

IV. Employment Affirmation Scheme.

V. TRYSEM. (Training of Rural Youth for self-employment).

VI. National Rural employment Programme.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪೋಸ್ಟ್ ಗ್ರಾಜುಯೇಟ್ಸ್, ಗ್ರಾಜುಯೇಟ್ಸ್, ಎಸ್.ಎಸ್.ಎಲ್.ಸಿ. ಪಾಸ್ ಆದವರು ಮತ್ತು ಅನಕ್ಷರಸ್ಥರು ಎಷ್ಟೆಷ್ಟು ಜನರಿದ್ದಾರೆ ಎಂಬುದನ್ನು ಕೊಟ್ಟಿದ್ದಾರೆ. ಇತರೆ ವರ್ಗದಲ್ಲಿ ಅನಕ್ಷರಸ್ಥರು ೧ ಲಕ್ಷ ಚಿಲ್ಲರೆ ಇದ್ದಾರೆ. ಅಂದರೆ ಇತರೆ ವರ್ಗದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್, ಬ್ಯಾಕ್‌ವರ್ಡ್ ಟ್ರೈಬ್, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಯಾವುದರಲ್ಲೂ ಸೇರದೇ ಇರುವವರನ್ನು ಇದರಲ್ಲಿ ಸೇರಿಸಿದ್ದಾರೆ. ಇದು ತಪ್ಪು ಮಾಹಿತಿ ಅಂಕಿ ಅಂಶಗಳನ್ನು ಸರಿಯಾಗಿ ಕೊಟ್ಟಿಲ್ಲವೆಂದು ನನಗನಿಸುತ್ತದೆ. ಆದ್ದರಿಂದ ಸ್ಪಷ್ಟವಾಗಿ ತಿಳಿಸುತ್ತೀರಾ ?

ಶ್ರೀ ಎ. ಬಿ. ಜಕನೂರು.—ಮಾನ್ಯ ಸದಸ್ಯರ ಪ್ರಶ್ನೆ ನನಗೆ ಅರ್ಥವೇ ಆಗಲಿಲ್ಲ.

ಶ್ರೀ ಎಂ. ಗಂಗಣ್ಣ.—ಅನಕ್ಷರಸ್ಥರಲ್ಲಿ ಇತರೇ ವರ್ಗದವರೂ ಇದ್ದಾರೆ. ಇಂಥವರು ೧ ಲಕ್ಷ ೧೦ ಸಾವಿರ ಜನರಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್, ಬ್ಯಾಕ್‌ವರ್ಡ್ ಟ್ರೈಬ್ಸ್, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಇವರು ಇತರೆ ವರ್ಗದಲ್ಲೂ ಬರುತ್ತಾರೆ. ನಿಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಅದನ್ನು ತಿದ್ದಿ ಪಡಿಯಾಡಿಕೊಳ್ಳುತ್ತೀರಾ?

ಶ್ರೀ ಎ. ಬಿ. ಜಕನೂರು.—ಅದರ್ಸ್ ಅಂದರೆ ಜನರಲ್‌ನವರೂ ಇದ್ದಾರೆ. ಹಿಂದುಳಿದ ವರ್ಗದ ಜಾತಿಗಳೂ ಬರುತ್ತವೆ. ಅದರ ಪ್ರಕಾರ ನಾವು ಕೊಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಏನಾದರೂ ಬೇಕಾದಲ್ಲಿ ಒದಗಿಸಿಕೊಡುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವೇ ಆಗುತ್ತಿಲ್ಲ. ಅದು ದಿನೇ ದಿನೇ ಇನ್ನೂ ಜಾಸ್ತಿಯಾಗುತ್ತಲೆ ಇದೆ. ಆದ್ದರಿಂದ ಅವರಿಗೆ ಏನಾದರೂ ಪರಿಹಾರವನ್ನು ಕೊಡುವ ಅಥವಾ ಭತ್ಯವನ್ನು ಕೊಡುವ ಯೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಎ. ಬಿ. ಜಕನೂರು.—ಪರಿಹಾರ ಕೊಡುವುದು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಶ್ರೀ ವಿ.ಎಂ. ಘಾಡಿ.—ಸ್ವಾಮಿ, ಹಿಂದುಳಿದ ವರ್ಗದಲ್ಲಿರತಕ್ಕವರ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರದವರು ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು.

SRI A. B. JA ANOOR — Following are the programmes. Programmes for extending training facilities to the Backward Class unemployed youths in Autoriksha Driving light/heavy vehicles and tractor driving. Then, self-employment programme by the Karnataka Backward Classes and Minorities Development Corporation Ltd.

ಶ್ರೀ ವಿ. ಎಂ. ಫಾಡಿ. - ಹಿಂದುಳಿದ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಇಂಗ್ಲೀಷಿನಲ್ಲಿ ಹೇಳಿದ್ದೀರಿ, ಕನ್ನಡದಲ್ಲಿ ಅದು ಪ್ರಿಂಟ್ ಆಗಿಲ್ಲ. ದಯವಿಟ್ಟು ಸ್ಪೆಸಿಫಿಕ್ ಆಗಿ ಹಿಂದುಳಿದವರಿಗೆ ಯಾವರೀತಿ ಯೋಚನೆ ಇದೆ ಟಿಕ್ಕಿಸಲಿ ತಿಳಿಸಿ?

ಶ್ರೀ ಎ. ಬಿ ಜಕನೂರ್.—ಹಿಂದುಳಿದವರಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವೆಂದು ಸಣ್ಣ ಉದ್ಯೋಗ ಯೋಜನೆಯನ್ನು ಮಾಡುತ್ತಿದ್ದೇವೆ.

ಶ್ರೀ ವೈ.ಕೇಲ್ ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳುವವರು ಬಹುಪಾಲು ಕ್ಲಾಸ್ ಫೋರ್ ಎಂದು ಹೇಳುತ್ತಾರೆ. ಸರ್ಕಾರಿ ಸಂಸ್ಥೆಗಳಲ್ಲ ಇದಕ್ಕೆ ಸಂಬಂದಪಟ್ಟವರು.....

ಅಧ್ಯಕ್ಷರು.—ಏಕೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಗ್ರಾಜುಯೇಟ್ಸ್ ಮತ್ತು ಮೆಡಿಕಲ್ ಗ್ರಾಜ್ಯುಯೇಟ್ಸ್ ಎಲ್ಲರೂ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ.

SRI MICHAEL B. FERNANDES.—Bulk of the registration is in the lower category *i.e.*, Class-IV and ClassI–III. ಸರ್ಕಾರಿ ಸಂಸ್ಥೆಗಳವರು ಅಲ್ಲಿಗೆ ಹೋಗುವುದೇ ಇಲ್ಲ. ನೇರವಾಗಿ ತೆಗೆದುಕೊಳ್ಳುವುದರಿಂದ ಅಲ್ಲಿ ರಿಜಿಸ್ಟರ್ ಮಾಡಿಸಿಕೊಂಡವರು ಹಾಗೆಯೇ ಉಳಿದುಕೊಳ್ಳುತ್ತಿದ್ದಾರೆ. ರಿಜಿಸ್ಟರ್ ಮಾಡಿಸಿಕೊಂಡರು ಸರ್ಕಾರದ ಕೆಲಸ ಸಿಕ್ಕುತ್ತದೆ ಕಾದು ಕುಳಿತುಕೊಂಡಿರುತ್ತಾರೆ. ನಿಜವಾಗಿಯೂ ನಾಲ್ಕನೇ ದರ್ಜೆ ಮತ್ತು ಮೂರನೇ ದರ್ಜೆ ನೌಕರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದಲೇ ತೆಗೆದುಕೊಳ್ಳುವುದಿದ್ದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತಲೇ ಇರಲಿಲ್ಲ. ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? All jobs in Government establishments including Local Self Government, Corporation should take people from Employment Exchange only. Would the Government ensure that they will go to the Employment exchange and give jobs to all those people registered there ?

ಶ್ರೀ ಎ. ಬಿ. ಜಕನೂರ್.—ಈಗ ನಾಲ್ಕನೇ ದರ್ಜೆಗೆ ಮಾತ್ರ ಸರ್ಕಾರವಾಗಲೀ, ಕಾರ್ಪೊರೇಷನ್ ಆಗಲಿ, ಅಥವಾ ಕೋ ಆಪರೇಟೀವ್ ಬೋರ್ಡ್ ಆಗಲಿ ತೆಗೆದುಕೊಳ್ಳುತ್ತಿದ್ದಾರೆ. ಬೇರೆಯವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದಲೇ ತೆಗೆದುಕೊಳ್ಳಬೇಕೆಂಬುದಕ್ಕೆ ಕಾಯಿದೆಯಾಗಲಿ, ಕಾನೂನಾಗಲಿ ಇಲ್ಲ.

ಅಧ್ಯಕ್ಷರು.—ಡೈರೆಕ್ಟಾಗಿ ಮೂರನೆದರ್ಜೆ ಮತ್ತು ನಾಲ್ಕನೆದರ್ಜೆಯ ನೌಕರರನ್ನು ತೆಗೆದುಕೊಳ್ಳುತ್ತಿರುವುದರಿಂದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಇವರು ರಿಜಿಸ್ಟರ್ ಮಾಡಿರುವುದರಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಳಿಯುವುದಕ್ಕೆ ಸಾಧ್ಯವಿರುತ್ತದೆ. ಆದ್ದರಿಂದ ಅಲ್ಲಿಂದಲೇ ತೆಗೆದುಕೊಳ್ಳುವುದಕ್ಕೆ ಕಡ್ಡಾಯ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಬಿ. ಜಕನೂರ್.—ಕಡ್ಡಾಯಮಾಡಲು ತಿದ್ದುಪಡಿ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಹಿಂದುಳಿದ ವರ್ಗದವರ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಲು ಹಾಕಿಕೊಂಡಿರತಕ್ಕಂಥ ೫ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ. ಈ ಐದು ಕಾರ್ಯಕ್ರಮಗಳಲ್ಲಿ ೩-೪ ಜನರಲ್ ಸ್ಕೀಮ್ ಇರುತ್ತದೆ. ಸ್ವಂತ ಉದ್ಯೋಗ ಮತ್ತು ದೃಢೀಕರಣ ಯೋಜನೆಗಾಗಿ ಸುಮಾರು ೫ ಲಕ್ಷ ರೂಪಾಯಿಗಳನ್ನು ಮಂಜೂರ್ ಮಾಡಿರುವುದರಲ್ಲಿ ಖರ್ಚಾಗಿರುವುದು ಎಷ್ಟು ಎಂಬುದನ್ನು ತಿಳಿಸಬೇಕು. ಮತ್ತು ಈ ಒಂದು ಯೋಜನೆಯಿಂದ ಎಸ್‌ಸಿ ಮತ್ತು ಎಸ್‌ಟಿ ಬ್ಯಾಕ್‌ವರ್ಡ್‌ಕ್ಲಾಸ್ ಕಮ್ಯುನಿಟಿಯವರಿಗೆ ಸರಿಯಾದ ಪ್ರಾತಿನಿಧ್ಯ ದೊರೆಯುತ್ತಿಲ್ಲ. ಆದ್ದರಿಂದ ಜಿಲ್ಲಾವಾರು ಹಣವನ್ನು ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.—೫ ಲಕ್ಷ ರೂಪಾಯಿಗಳು ಏನು ಮಂಜೂರಾಗಿರುತ್ತದೆ. ಇದರಲ್ಲಿ ಖರ್ಚಾಗಿರತಕ್ಕಂಥದ್ದು ಎಂದರೆ, ಸ್ವಂತ ಉದ್ಯೋಗ ತರಬೇತಿ ಯೋಜನೆಯಲ್ಲಿ ಸುಮಾರು ಎಂಟು ನೂರು ಜನ ಟ್ರೈನಿಗಳು ಇರುತ್ತಾರೆ. ಇವರಿಗೆ ಎಷ್ಟೆಷ್ಟು ಖರ್ಚಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಬೇಕಾದರೆ ಅದನ್ನು ತರಿಸಿಕೊಡುತ್ತೇನೆ.

SRI PRABHAKAR TELKAR.—Sir, whenever interviews are called for by the Employment Exchange to send candidates to various Government Departments and other places it is seen that candidates belonging to SC/STs and other Backward Class people won't get interview. They never receive the intimation at all. Instead people of other communities are asked to appear for interview before the Employment Exchange. Thus, it can be said that while sending interviews they are not following the reservation order issued from time to time. Would the Government take steps to implement the reservation orders while sending interviews to the candidates?

ಶ್ರೀ ಎ. ಬಿ ಜಕನೂರ್.—ಈಗ ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಲಿಸ್ಟ್ ಕೇಳಿದಾಗ ಅವರು ಲಿಸ್ಟ್‌ನ್ನು ಕಳುಹಿಸಿಕೊಡುತ್ತಾರೆ, ಇಷ್ಟು ಜಾಗ ತುಂಬುವುದು ಇರುತ್ತದೆ, ಇದರಲ್ಲಿ ಇಷ್ಟು ಹರಿಜನ ಗಿರಿಜನರಿಗೆ ಮಿಸಲಾಗಿದೆ, ಇಷ್ಟು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಮೀಸಲಾಗಿದೆ, ಇಷ್ಟು ಟೆಕ್ನೀಷಿಯನ್ಸ್ ಬೇಕಾಗುತ್ತದೆಂದು ಲಿಸ್ಟ್‌ನ್ನು ಕಳುಹಿಸಿಕೊಡುತ್ತಾರೆ. ಇದರಲ್ಲಿ ಸೀನಿಯಾರಿಟಿ ಪ್ರಕಾರ ಕಳುಹಿಸುತ್ತಾರೆಯೇ ಹೊರತು ಸೀರಿಯಲ್ ನಂಬರ್ ನೋಡುವುದಿಲ್ಲ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ ಹಿಂದುಳಿದ ವರ್ಗದವರಿಗೆ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಕೆಲಸಗಳನ್ನು ಕೊಡುತ್ತಿದ್ದೇವೆಂದು ಹೇಳಿದಿರಿ. ಆದರೆ ಯೋಜನೆ ಈಗಾಗಲೇ ಇದ್ದು ಎಷ್ಟೋ ಕಡೆಗಳಲ್ಲಿ ಕೆಲಸಗಳನ್ನು ಕೊಟ್ಟಿದ್ದಾರೆ. ಹೀಗೆ ಕೊಡುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ನಂಬರ್‌ಗಳನ್ನು ತರಿಸಿಕೊಳ್ಳುವಾಗ ಹೊಸದಾಗಿ ಸೇರಿಕೊಂಡವರು ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಗೋಲ್‌ಮಾಲ್ ಮಾಡಿ ಕಳುಹಿಸಿಕೊಟ್ಟಿರತಕ್ಕಂಥದ್ದು ತಪ್ಪು ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಸೀನಿಯಾರಿಟಿ ಓವರ್‌ಲುಕ್ ಮಾಡಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಹೇಳಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಸಿದ್ದಮಾದಯ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ಯುವಕರಿಗೆ ಸ್ವಂತ ಉದ್ಯೋಗ ತರಬೇತಿ ಕೊಡುವುದಾಗಿ ಹೇಳಿದ್ದೀರಿ. ಇದರಲ್ಲಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ, ಮತ್ತು ಹಿಂದುಳಿದವರಿಗೆ ಎಷ್ಟು ಕೊಟ್ಟಿದ್ದೀರಿ ದಯವಿಟ್ಟು ತಿಳಿಸಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಅಪ್ಲಿಕೇಶನ್ ಹಾಕತಕ್ಕಂಥ ಯುವಕರಿಗೆ ಇಂಟರ್‌ವ್ಯೂ ಕೂಡ ಬರುತ್ತಿಲ್ಲ. ಇದರ ಬಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಈ ಯೋಜನೆ ಏನು ಇದೆ. ಈ ಯೋಜನೆಯಲ್ಲಿ ಎಷ್ಟು ಜನ ಹರಿಜನ ಗಿರಿಜನರು ಮುಂದೆ ಬಂದು ಇದರ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ಅಂಕಿ ಅಂಶಗಳು ಇಲ್ಲ. ಅಂಕಿಅಂಶಗಳನ್ನು ತರಿಸಿಕೊಂಡು ತಿಳಿಸುತ್ತೇನೆ.

Meetings of the DDC Chitradurga

243 SRI H. SHIVAPPA (Harihara).—Will the Minister for Rural Development and Panchayat Raj be pleased to state.

the number of District Development Council meetings held by the Chairman and Deputy Commissioner, Chitradurga.